**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ – 1

**CC No: 398/2021** ಚಾಸ- 3

| | |
|---|---|
| ಹೆಸರು | ಅಶೋಕ ಎಸ್.ಕೆ. |
| ತಂದೆ/ಗಂಡನ ಹೆಸರು | ಕಟ್ಟೆಗೌಡ |
| ವಯಸ್ಸು | 41 ವರ್ಷ |
| ಉದ್ಯೋಗ | ಪೊಲೀಸ್ ಪೇದೆ, ಹಳ್ಳಿಮೈಸೂರು ಠಾಣೆ. |
| ವಾಸಸ್ಥಳ | ಹಳ್ಳಿಮೈಸೂರು |

ದಿನಾಂಕಃ 17.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ-**

2018 ನೇ ಸಾಲಿನಿಂದ ಇಲ್ಲಿಯವರೆಗೆ ನಾನು ಹಳ್ಳಿಮೈಸೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ : 05.07.2021 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಪಿ.ಎಸ್.ಐ. ರವರಾದ ಚಾಸಾ 1 ರವರಿಗೆ 3 ಗಂಟೆ ಸಮಯದಲ್ಲಿ ಯಾವುದೋ ಒಂದು ವಾಹನದಲ್ಲಿ ಅರಕಲಗೂಡು ಜೋಡಿ ಗುಬ್ಬಿ ಓಡನಹಳ್ಳಿ ಹಳ್ಳಿಮೈಸೂರು ಮಾರ್ಗವಾಗಿ ಬೇರ್ಯಕ್ಕೆ ಹೋಗಲು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಸುಮಾರು 7-8 ಜಾನುವಾರುಗಳನ್ನು ತುಂಬಿಕೊಂಡು ಬರುತ್ತಿರುತ್ತಾರೆಂದು ಬಂದ ಖಚಿತ ಮಾಹಿತಿ ಮೇರೆಗೆ 3.10 ರ ಸಮಯಕ್ಕೆ ಇಬ್ಬರು ಪಂಚರನ್ನು ಠಾಣೆಗೆ ಬರಮಾಡಿಕೊಂಡು ಸದರಿಯವರಿಗೆ ಕೃತ್ಯದ ಬಗ್ಗೆ ಮಾಹಿತಿ ತಿಳಿಸಿ ಪಂಚರಾಗಿ ಸಹಕರಿಸುವಂತೆ ಹೇಳಿ ಸದರಿಯವರಿಗೆ ನೋಟಿಸ್ ಜಾರಿ ಮಾಡಿ ನನಗೆ ಹಾಗೂ ಚಾಸಾ 2 ರವರಿಗೆ ಮಾಹಿತಿಯನ್ನು ತಿಳಿಸಿರುತ್ತಾರೆ. ಠಾಣೆಯಿಂದ ನಾನು, ಪಂಚರು ಹಾಗೂ ಚಾಸಾ 1 ರವರು ಇಲಾಖಾ ಜೀಪ್ ಸಂಖ್ಯೆ ಕೆಎ 13 ಜಿ 545 ನಲ್ಲಿ ಜೀಪ್ ಚಾಲಕ ಚಾಸಾ 4 ರವರೊಂದಿಗೆ ಜೀಪ್‌ನಲ್ಲಿ 3.10 ಕ್ಕೆ ಬಿಟ್ಟು ಅರಕಲಗೂಡು ರಸ್ತೆ ಮಾರ್ಗವಾಗಿ ಹೋಗಿ ಮಳ್ಳಿಗನಹಳ್ಳಿ ಗ್ರಾಮದ ಹತ್ತಿರ ನಾಗರಾಜು ರವರ ತೆಂಗಿನ ತೋಟದ ಬಳಿ ಪಿ.ಎಸ್.ಐ. ರವರು ಚಾಲಕನಿಗೆ ಜೀಪ್ ಅನ್ನು ತಿಳಿಸುವಂತೆ ತಿಳಿಸಿರುತ್ತಾರೆ. ಅದರಂತೆ ಜೀಪ್ ಅನ್ನು ರಸ್ತೆ ಬಳಿಯಲ್ಲಿ ನಿಲ್ಲಿಸಿದಾಗ 3.30 ರ ಸಮಯದಲ್ಲಿ ಕೆಎ 54 5317 ಅಶೋಕ್ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನ ಓಡನಹಳ್ಳಿ ಮಾರ್ಗವಾಗಿ ಬರುತ್ತಿದ್ದನ್ನು ತಡೆದು ನಿಲ್ಲಿಸಿ ಪರಿಶೀಲಿಸಲಾಗಿ ಯಾವುದೇ ಪರವಾನಗಿ ಇಲ್ಲದೇ 7 ಜಾನುವಾರುಗಳನ್ನು ತುಂಬಿಕೊಂಡಿರುವುದು ಕಂಡುಬಂದಿರುತ್ತದೆ. ನಂತರ

ಪರಿಶೀಲಿಸಲಾಗಿ ವಾಹನದಲ್ಲಿ ಇಬ್ಬರು ವ್ಯಕ್ತಿಗಳಿದ್ದು ಒಬ್ಬ ವ್ಯಕ್ತಿ ಮಹಮದ್ ಯಾಸೀನ್ ಬಿನ್ ಬಾಬು, ಮತ್ತೊಬ್ಬ ವಿಶ್ವಾಸ್ ಬಿನ್ ಮಹಲಿಂಗಯ್ಯ, ಇಬ್ಬರು ಮಾಚಗೌಡನಹಳ್ಳಿ ಗ್ರಾಮ, ಮಲ್ಲಿಪಟ್ಟಣ ಹೋಬಳಿ, ಅರಕಲಗೂಡು ತಾಲ್ಲೂಕಿನವರಾಗಿರುತ್ತಾರೆ. ಸದರಿ ವಾಹನದಲ್ಲಿ 3 ಎಮ್ಮೆಗಳು, ಒಂದು ಕೋಣ ಮತ್ತು ಮೂರು ಹೋರಿ ಕರುಗಳು ಇದ್ದವು. ಇವುಗಳನ್ನು ಅಕ್ರಮವಾಗಿ ಕಸಾಯಿಖಾನೆಗೆ ಮಾರಾಟ ಮಾಡುತ್ತಿರುವುದು ಕಂಡಬಂದ ಮೇರೆಗೆ ಚಾಸಾ 1 ರವರು ಸ್ಥಳದಲ್ಲಿ ಲ್ಯಾಪ್‌ಟಾಪ್ ಸಹಾಯದಿಂದ ವರದಿಯನ್ನು ತಯಾರಿಸಿ ಚಾಸಾ 2 ರವರ ಮೂಲಕ ಠಾಣೆಗೆ ಕಳುಹಿಸಿರುತ್ತಾರೆ. ನಂತರ ಪ್ರಕರಣವನ್ನು ದಾಖಲಿಸುವಂತೆ ತಿಳಿಸಿರುತ್ತಾರೆ. ನಂತರ ಪ್ರಕರಣ ದಾಖಲಿಸಿ ಬಂದ ನಂತರ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ. ನಂತರ ಅಶೋಕ್ ಲೈಲ್ಯಾಂಡ್ ಮಿನಿ ಗೂಡ್ಸ್ ವಾಹನಕ್ಕೆ ಕಮಾನು ರೀತಿಯಲ್ಲಿ ಟಾರ್ಪಲ್ ಹಾಕಿದ್ದು ಸದರಿ ವಾಹನದಲ್ಲಿ ಇದ್ದಂತಹ ಜಾನುವಾರುಗಳನ್ನು ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ. ಸದರಿ ಮಹಜರ್ ಅನ್ನು ಸಂಜೆ 5.30 – 6.30 ರವರೆಗೆ ಬರೆಯಲಾಗಿರುತ್ತದೆ. ಸ್ಥಳದಲ್ಲಿ ಇದ್ದಂತಹ ವಾಹನ ಜಾನುವಾರು ಮತ್ತು ಆರೋಪಿಗಳನ್ನು ವಶಕ್ಕೆ ಪಡೆದು ಜಾನುವಾರುಗಳನ್ನು ಗೋಶಾಲೆಗೆ ಕಳುಹಿಸಲಾಗಿರುತ್ತದೆ. ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ. ಸದರಿ ಮಹಜರ್‌ಗೆ ನಾನು ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ 1 , ಸಾಕ್ಷಿ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ವಾಹನದಲ್ಲಿದ್ದಂತಹ ಎಮ್ಮೆಗಳಿಗೆ 5 ವರ್ಷ ವಯಸ್ಸಾಗಿತ್ತು. ಸದರಿ ಎಮ್ಮೆಗಳು ಕಪ್ಪುಬಣ್ಣದಿಂದ ಕೂಡಿತ್ತು. ಮೂರು ಹೋರಿ ಕರುಗಳು ಕೆಂದು ಬಣ್ಣದ್ದಾಗಿತ್ತು. ಸುಮಾರ 1 ವರ್ಷಗಳ ವಯಸ್ಸಾಗಿತ್ತು. ವಾಹನದ ಟಾರ್ಪಲ್ ಮೂರು ಬಣ್ಣದ್ದಾಗಿದ್ದು, ನೀಲಿ, ಸಿಮೆಂಟ್ ಹಾಗೂ ಹಳದಿ ಬಣ್ಣದಿಂದ ಕೂಡಿತ್ತು.

**<u>ಪಾಟೀಸವಾಲು ಶ್ರೀ. ಹೆಚ್.ಎಸ್.ಸಿ. ವಕೀಲರಿಂದ :-</u>**

ನಾನು 6 ವರ್ಷದಿಂದ ಹಳ್ಳಿಮೈಸೂರು ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ದಿನಾಂಕ : 05.07.2021 ರಂದು ಠಾಣೆಯಲ್ಲಿ ಹಗಲು ಕರ್ತವ್ಯದಲ್ಲಿ ನೇಮಕವಾಗಿದ್ದೇನೆ. ನನ್ನ ಕರ್ತವ್ಯ ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯಾಗಿತ್ತು. ನನ್ನ ಠಾಣಾ ದಿನಚರಿಯಲ್ಲಿ ನನ್ನ ಕರ್ತವ್ಯದ ಬಗ್ಗೆ ಉಲ್ಲೇಖ ಮಾಡಿರುತ್ತೇನೆ. ಚಾಸಾ 1 ರವರು ಅದನ್ನು

ಪಡೆದಿರುವುದಿಲ್ಲ. ಮಧ್ಯಾಹ್ನ 3 ಗಂಟೆಗೆ ಬಾತ್ಮೀ ಬಂದಿರುವುದಾಗಿ ತಿಳಿಸಿರುತ್ತಾರೆ. ಠಾಣೆಯಲ್ಲಿ ಬೇರೆ ಸಾರ್ವಜನಿಕರು ಇರಲಿಲ್ಲ. ಪಂಚರನ್ನ ಬರಮಾಡಿಕೊಂಡಿದ್ದರು. ಬಾತ್ಮೀ ವಿಚಾರ ಬಂದ ನಂತರ ಪಂಚರನ್ನು ಠಾಣೆಗೆ ಹಾಜರುಪಡಿಸಿಕೊಳ್ಳಲಾಗಿರುತ್ತದೆ. ಪಂಚರು ಹಳ್ಳಿಮೈಸೂರು ಗ್ರಾಮದವರಾಗಿರುತ್ತಾರೆ. ಬಾತ್ಮೀ ವಿಚಾರ ಬಂದ ನಂತರ ಸರ್ಕಾರಿ ವಾಹನದಲ್ಲಿ ಹೋಗಿರುತ್ತೇವೆ. ನಮ್ಮ ಇಲಾಖಾ ಜೀಪ್‌ನಲ್ಲಿ ವಿದ್ಯುತ್ ಸಂಪರ್ಕದ ವ್ಯವಸ್ಥೆ ಇರುವುದಿಲ್ಲ. ಆದರೆ ಲ್ಯಾಪ್ ಟಾಪ್ ಇರುತ್ತದೆ. ಲ್ಯಾಪ್ ಟಾಪ್ ಹೊರತುಪಡಿಸಿ ಇನ್ಯಾವುದೇ ಪರಿಕರಗಳನ್ನು ತೆಗೆದುಕೊಂಡಿರುವುದಿಲ್ಲ ಅಂದರೆ ಪೆನ್ ಡ್ರೈವ್ ತೆಗೆದುಕೊಂಡು ಹೋಗಿರುತ್ತೇವೆ. ನಾವು ಮಲ್ಲಿಗನಹಳ್ಳಿ ಗ್ರಾಮಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಲ್ಲಿಗನಹಳ್ಳಿಯಲ್ಲಿ ನಾಗರಾಜು ರವರ ತೋಟದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ತಿಂಗಳ ಮೊದಲ ವಾರದಲ್ಲಿ ರಾಮಾನಥಪುರ ಹಾಗೂ ಚನ್ನರಾಯಪಟ್ಟದಲ್ಲಿ ದನಗಳ ಸಂತೆ ನಡೆಯುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಲ್ಲಿಗನಹಳ್ಳಿ ಗ್ರಾಮಕ್ಕೆ ಹಳ್ಳಿಮೈಸೂರು ಮಾರ್ಗವಾಗಿ ಹೋಗಿರುತ್ತೇವೆ. ಮಲ್ಲಿಗನಹಳ್ಳಿ ಗ್ರಾಮಕ್ಕೆ ನಾವು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರಿಗೆ ಚಾಸಾ 1 ರವರು ನೋಟಿಸ್ ನೀಡಿರುತ್ತಾರೆ. ಚಾಸಾ 1 ರವರು ಪಂಚರಿಗೆ ನೋಟಿಸ್ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ಇಬ್ಬರು ಪಂಚರು, ನಾನು, ದೊಡ್ಡೇಗೌಡ, ಚಾಸಾ 1 ರವರು ಸಹಿ ಮಾಡಿರುತ್ತಾರೆ. ನಿಪಿ 1 ರ ದಾಖಲೆಯನ್ನು ಚಾಸಾ 1 ರವರು ತಯಾರು ಮಾಡಿರುತ್ತಾರೆ. ನಿಪಿ 1 ರ ದಾಖಲೆಯನ್ನು ಲ್ಯಾಪ್‌ಟಾಪ್ ಸಹಾಯದಿಂದ ದಾಖಲು ಮಾಡಲಾಗಿರುತ್ತದೆ. ಚಾಸಾ 1 ರವರು ಮಲ್ಲಿಗನಹಳ್ಳಿ ಗ್ರಾಮದಲ್ಲಿ ಯಾವುದೇ ವಾಹನವನ್ನು ಅಮಾನತ್ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ದಾಖಲೆಯನ್ನು ಠಾಣೆಯಲ್ಲೇ ಕುಳಿತು ತಯಾರು ಮಾಡಿದ್ದು, ನಾವು ಯಾವುದೇ ದಾಳಿಯಲ್ಲಿ ಪಾಲ್ಗೊಂಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ಠಾಣಾ ಅಂಕಿ ಅಂಶಕ್ಕೋಸ್ಕರ ನಿಪಿ 1 ನ್ನು ಸೃಷ್ಠಿ ಮಾಡಿದ್ದು, ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಮಾಹಿತಿ ಬರದೇ ಇದ್ದರು ಸಹಾ ಠಾಣೆಯಲ್ಲೇ ಕುಳಿತು ದಾಖಲೆಯನ್ನು ತಯಾರು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತಹ ಅಮಾನತ್ ಮಹಜರ್ ಅನ್ನು ತಯಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಯಾವುದೇ ಜಾನುವಾರುಗಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಆರೋಪಿತರಿಂದ ಜಾನುವಾರುಗಳನ್ನು ಅಮಾನತ್ ಮಾಡಿಕೊಳ್ಳುವ ಪ್ರಶ್ನೆ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಮಾಡದೇ ಇದ್ದರು ಸಹಾ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ಓ. ಹೇ. ಕೇ. ಸ. ಇ. ಒ,

(ಅಮರ್ ವಿ.ಎಲ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆಎಂಎಫ್ಸಿ ರವರು ಹೊಳೆನರಸೀಪುರ